# ಬಯಲ ಭಾವಿಯ ನೀರಿಗೆ ಬಂದಳೊಬ್ಬಳು

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 65.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 68.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 361.
4. **Note:** These lyrics are not available in other standard books that I referred.
5. **Note:** Lyrics given without highlights are as per Ref. 1. The wordings in Ref. 2 are fully matching except one word which is given in yellow highlights. The wordings in Ref. 3 are different and are given separately in green highlights.

ರಾಗ: ಮೋಹನ ತಾಳ: ಛಾಪು

ಬಯಲ ಬಾವಿಯ ನೀರಿಗೆ ಬಂದಳೊಬ್ಬಳು ಬಾಲೆ
ಬಾಯಾರಿ ಬಿದ್ದಳು ಕೊಡವೊಡೆಯಿತು ನೀರುರುಳಿತು ॥ ಪ ॥

ನೀರಿಲ್ಲದೆ ನೆರಳಿಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ
ಹೂವಿಲ್ಲದೆ ಕಾಯಿಲ್ಲದೆ ಅದು ಫಲಕೆ ಬಂದು
ಕರವಿಲ್ಲದೆ ಕಾಲಿಲ್ಲದೆ ಕೊಯ್ವರಯ್ವರು ಆ ಹಣ್ಣನು
ಮರುಳಾಯಿತು ಮೂವತ್ತು ಸಾವಿರ ಮಂದಿ ॥ ೧ ॥

ಕುರುಡ ಕಂಡನು ಸರ್ಪನಡುವಿರುಳು ಬಾಹುದನು
ಮೂಕ ಕಂಡನು ಕನಸ, ಕಿವುಡನು ಕೇಳಿದ
ಇರವು ಹಾರಿತು ಗಗನಕೆ, ಮರವು ಮುರಿಯಿತು ನೋಡಿ
ವಿಧಿ ತನ್ನ ಬೇಟೆಗೆ ಹೋಗುವ ಸಡಗರ ನೋಡಿ ॥ ೨ ॥

ರಚ್ಚೆಗೆ (ಕಿಚ್ಚಿನ) ಕೊಡದವಳೆ ನೀ ಬಂದೆ ತೋರಣಗಟ್ಟಿ
ರಚ್ಚೆಗೆ ಬಾಹೋರು ನಾಲುವರೊಳಗೆ
ಉಚ್ಚರಿಸಲಾಸಲ್ಲ ಕೇಳು ಪುರುಷನ ಸೊಲ್ಲ
ಅಚ್ಚ ಪುರಂದರ ವಿಠಲ ತಾನೆ ಬಲ್ಲ ॥ ೩ ॥

**Note:** The below mentioned lyrics are as per Ref. 3 above.

ರಾಗ: ಮೋಹನ                    ತಾಳ: ಛಾಪು

ಬಯಲ ಭಾವಿಗೆ ಬಂದಳೋರ್ವ ಬಾಲೆ
ಕಾಲು ಜಾರಿತು ಕೊಡ ಒಡೆಯಿತು ನೀರುರುಳಿತು     ‖ ಪ ‖

ನೆರಳಿಲ್ಲದೆ ನೀರಿಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ
ಹೂವಿಲ್ಲದೆ ಕಾಯಿಲ್ಲದೆ ಫಲ ಬಂದಿತು
ಕರವಿಲ್ಲದೆ ಕಾಲಿಲ್ಲದೆ ಕೊಯ್ಯುವರು ಮೂವರು
ಫಲ ಉಂಬರೆಂಭತ್ತನಾಲ್ಕು ಲಕ್ಷದಲ್ಲಿ     ‖ ೧ ‖

ಕುರುಡ ಕಂಡನು ಹೂವು ನಡುವಿರುಳೆ ಬಾಹುದನು
ಮೂಕ ಕಂಡನು ಕನಸು, ಕಿವುಡ ಕೇಳಿ
ಸ್ಥಿರವೆಂದು ಇರವು ದಿಟ್ಟ ಗಗನಕೆ ಹಾರಿ
ಮರವು ಮುರಿಯಿತು ನೋಡೆ ಸರಿಯಾಗಿದ್ದಂಥ     ‖ ೨ ‖

ಹೆಚ್ಚಿನ ಕೊಡದವಳು ಕಂಚಿ ತೋರಣ ಕಟ್ಟಿ
ರಚ್ಚೆಗೆ ಬರಲು ನಾಲ್ವರ ಮುಂದಕೆ
ಉಚ್ಚರಿಸಲೊಶವಲ್ಲ ಕೇಳು ಸಜ್ಜನ ಸೊಲ್ಲ
ನಿಚ್ಚ ಭಾವಗಳ ಪುರಂದರ ವಿಠ್ಠಲ ಬಲ್ಲ     ‖ ೩ ‖

**Classification:** Mundige
**Ankita:** purandara vittala
**Location:** NA
**Category:** SankeerNa Sangraha
**Sub-Category:** hennu, niru, huvu, kai, hannu, jana, uraga, kanasu, akasha, mara,
**Pravachana:** NA
**Explanation:** NA